**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**
**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5022/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಉಮಾಶಂಕರ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ಶಿವಲಿಂಗು.ಕೆ | 17.06.2026 |
| **ವಯಸ್ಸು** | : | 43 ವರ್ಷ | |
| **ವೃತ್ತಿ** | : | ಪೊಲೀಸ್ ಪೇದೆ, ಕೊಳ್ಳೇಗಾಲ ವೃತ್ತ ಕಛೇರಿ | **ಪ್ರಾ.ಸಾಃ** 20 |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ** 41 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು 2023 ರಿಂದ ಕೊಳ್ಳೇಗಾಲ ವೃತ್ತ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 07.03.2025 ರಂದು ಚಾಸಾ 32 ಮತ್ತು 33 ರವರು ಆರೋಪಿಯ ಮೋಟಾರ್ ಸೈಕಲ್ ಸಂಖ್ಯೆ ಕೆಎ-04-ಇಕೆ-6042 ಅನ್ನು ಹಾಜರುಪಡಿಸಿದ್ದು, ಅದನ್ನು ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡರು. ಆ ಸಮಯದಲ್ಲಿ ಚಾಸಾ 2 ರವರು ಇದ್ದರು. ಆ ಸಮಯದಲ್ಲಿ ನಾನು ವಿಡೀಯೋ ಚಿತ್ರೀಕರಣ ಮಾಡಿರುತ್ತೇನೆ. ಆಗ ಸಮಯದಲ್ಲಿ ಸಂಜೆ 5.30 ರಿಂದ 6.00 ಗಂಟೆಯಾಗಿತ್ತು. ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಮೋಟಾರ್ ಸೈಕಲ್ ಅನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿ ಭಾವಚಿತ್ರಗಳಲ್ಲಿ ಮೋಟಾರ್ ಸೈಕಲ್ ಅನ್ನು ನೋಡಿ ಗುರುತಿಸಿರುತ್ತಾರೆ. ಭಾವಚಿತ್ರಗಳನ್ನು ನಿಪಿ 9 ಮತ್ತು 10 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

ವಿಡೀಯೋ ಚಿತ್ರೀಕರಣ ಮಾಡಿದ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63 (4) (ಸಿ) ರಂತೆ ದೃಡೀಕರಣವನ್ನು ನೀಡಿರುತ್ತೇನೆ. ದೃಡೀಕರಣವನ್ನು ನಿಪಿ 49 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ 49(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಸಿ.ಆರ್ ವಕೀಲರಿಂದ**

ನಾನು ಮಹಜರ್ ನ ವಿಚಾರಗಳನ್ನು ತಿಳಿದುಕೊಂಡಿರುವುದಿಲ್ಲ. ನಾನು ಸೋನಿ ಕ್ಯಾಮೇರಾ ಸಂಖ್ಯೆಃ ಹೆಚ್ ಡಿ ಆರ್ ಸಿ ಎಕ್ಸ್ 405 ಮೂಲಕ ವಿಡೀಯೋ ಚಿತ್ರೀಕರಣ ಮಾಡಿರುತ್ತೇನೆ. ಸದರಿ ಕ್ಯಾಮೇರಾದಲ್ಲಿ ದಿನಾಂಕ ಮತ್ತು ಸಮಯ ಮುದ್ರಣವಾಗುತ್ತದೆ. ಸದರಿ ಕ್ಯಾಮೇರಾದಲ್ಲಿ in built memory card ಇರುತ್ತದೆ. ಅದರ ಶೇಖರಣ ಸಾಮರ್ಥ್ಯ ಗೊತ್ತಿಲ್ಲ. ಅದೇ ದಿನ ತನಿಖಾಧಿಕಾರಿಗಳು ಭಾವಚಿತ್ರಗಳನ್ನು ಪಡೆದಿರುತ್ತಾರೆ. ಅದೇ ನಾನು ನಿಪಿ 49 ರಂತೆ ದೃಡೀಕರಣವನ್ನು ನೀಡಿರುತ್ತೇನೆ. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ. ನಾನು ಆ ದಿನ ಯಾವುದೇ ಚಿತ್ರೀಕರಣ ಮಾಡಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮುಂದೆ ಚಾಸಾ 32 ಮತ್ತು 33 ರವರು ದ್ವಿಚಕ್ರ ವಾಹನವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ